ಬಾಕಿಯಿರುವ ಪ್ರಕರಣಗಳಿಗೆ ಕಾರಣ :

1) ಕೆಲವು ಕೆಲಸಗಳಿಗೆ, ಕಾರ್ಯಗಳು ಪ್ರಗತಿಯಲ್ಲಿವೆ. ಮತ್ತೆ ಕೆಲವು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದವರಿಂದ ಮಂಡಳಿಗೆ ಸಿ.ಆರ್. ಮುಚ್ಚಳಿಕೆ ವಿವರ ಕೊಡದೆ ಇರುವುದರಿಂದಲೂ

2) ಪ್ರಗತಿಗೆ ಸಾಮಾಗ್ರಿಗಳ ಕೊರತೆ.

3) ಕ.ವಿ.ಮಂ. ನಿಂದ ಕೆಲಸಪೂರ್ಣವಾಗಿದ್ದರೂ, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದವರು ಸರ್ವಿಸ್ ತೆಗೆದುಕೊಳ್ಳಲು ಮುಂದೆ ಬಾರದೇ ಇರುವುದು.

ಇ) 1996-97ನೇ ಸಾಲಿನಲ್ಲಿ ವೈಯಕ್ತಿಕ ನೀರಾವರಿ ಪಂಪ್ ಸೆಟ್‌ಗಳಿಗೆ ಸಂಪರ್ಕ ಕೋರಿ ಬಂದ ಪ್ರಸ್ತಾವನೆಗಳು 82012.

ಈ) ಒಂದು ವರ್ಷಕ್ಕೂ ಮೀರಿ ಬಾಕಿ ಉಳಿದಿರುವ ನೀರಾವರಿ ಅರ್ಜಿಗಳ ಸಂಖ್ಯೆ : 21,700.

ಉ) ತಾರೀಖು 24-7-97ರ ವರೆಗೆ ಒಟ್ಟು 17809 ಅಕ್ರಮ ನೀರಾವರಿ ಪಂಪ್ ಸೆಟ್ ಸಂಪರ್ಕಗಳನ್ನು ಸಕ್ರಮ ಮಾಡಲಾಗಿರುತ್ತದೆ. ಅದರಿಂದ ಮಂಡಳಿಗೆ ಬಂದ ಆದಾಯ ರೂ: 11,84,51,470-00

ರಾಜ್ಯದಲ್ಲಿ "ಸಿ" ಮತ್ತು "ಡಿ" ಖಾಲಿ ಹುದ್ದೆಗಳ ನೇಮಕಾತಿ

1757 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಗ್ರೂಪ್. 'ಸಿ' ಮತ್ತು ಗ್ರೂಪ್ 'ಡಿ' ಹುದ್ದೆಗಳ ಸಂಖ್ಯೆ ಎಷ್ಟು? (ಇಲಾಖಾವಾರು ಮಾಹಿತಿ ನೀಡುವುದು)

ಆ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಎಲ್ಲಾ ಗ್ರೂಪುಗಳಲ್ಲಿ ಖಾಲಿಯಿರುವ ಒಟ್ಟು ಹುದ್ದೆಗಳ ಸಂಖ್ಯೆ : 93,817 ಇರುತ್ತದೆ. (ಇಲಾಖಾವಾರು ಲಭ್ಯವಿರುವ 1996-97 ರಲ್ಲಿನ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ನೇರ ನೇಮಕಾತಿ ನಿರ್ಬಂಧವನ್ನು ದಿನಾಂಕ 8-11-1993 ರಿಂದ ರದ್ದುಗೊಳಿಸಲಾಗಿದೆ. ಅವಶ್ಯವಿರುವ ಕಡೆ ನೇರ ನೇಮಕಾತಿ ಮಾಡಲು ಆರ್ಥಿಕ ಮಿತವ್ಯಯದ ಆದೇಶವನ್ನು ಸಡಿಲಿಸಿ ರಿಕ್ತ ಸ್ಥಾನವನ್ನು ತುಂಬಲು ಕ್ರಮ ಕೈಗಳ್ಳಲಾಗುತ್ತದೆ.

ಅನುಬಂಧ

ರಾಜ್ಯದ ವಿವಿಧ ಇಲಾಖೆಗಳಲ್ಲಿ 1996-97 ರಲ್ಲಿ ಖಾಲಿಯಿರುವ ಹುದ್ದೆಗಳು.

ಕ್ರ. ಸಂ.	ಇಲಾಖೆಯ ಹೆಸರು	ಒಟ್ಟು ಖಾಲಿ ಹುದ್ದೆಗಳು
1	2	3
1.	ಒಳಾಡಳಿತ ಮತ್ತು ಸಾರಿಗೆ ಇಲಾಖೆ	3695
2.	ಆರ್ಥಿಕ ಇಲಾಖೆ	1628
3.	ಶಿಕ್ಷಣ ಇಲಾಖೆ	27624
4.	ಲೋಕೋಪಯೋಗಿ ಇಲಾಖೆ	2188
5.	ನೀರಾವರಿ ಇಲಾಖೆ	3953
6.	ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ	2355
7.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	18318
8.	ಸಮಾಜ ಕಲ್ಯಾಣ ಇಲಾಖೆ	7100
9.	ಕಾರ್ಮಿಕ ಇಲಾಖೆ	1063
10.	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ	552
11.	ಕನ್ನಡ ಮತ್ತು ಸಂಸ್ಕೃತಿ ಇಲಾಖೆ	181
12.	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	1057
13.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	1560
14.	ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ	659
15.	ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ	4565
16.	ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ	2509
17.	ಕೃಷಿ ಮತ್ತು ತೋಟಗಾರಿಕೆ ಇಲಾಖೆ	2914
18.	ಕಂದಾಯ ಇಲಾಖೆ	6164
19.	ಸಹಕಾರ ಇಲಾಖೆ	1183
20.	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ	271

1	2	3
21.	ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆ	347
22.	ಇಂಧನ ಇಲಾಖೆ	-
23.	ವಿಜ್ಞಾನ ಮತ್ತ ಯಂತ್ರಕಲೆ	6
24.	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	654
25.	ರಾಜ್ಯಪಾಲರ ಸಚಿವಾಲಯ	23
26.	ಇತರೆ ಆಡಳಿತ ಸೇವೆಗಳು	1545
27.	ಇತರೆ ಸಾಮಾನ್ಯ ಆರ್ಥಿಕ ಸೇವೆಗಳು	1703
	ಒಟ್ಟು	**93,817**

(ಜಿಲ್ಲಾ ಪರಿಷತ್‌ಗಳಿಗೆ ಸಂಬಂಧಪಟ್ಟ ಮಾಹಿತಿಯೂ ಸೇರಿದಂತೆ)

ರಾಜ್ಯದಲ್ಲಿ ಸರ್ಕಾರಿ ನೌಕರರ ವರ್ಗಾವಣೆ ಕುರಿತು.

1758 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ನೌಕರರ ವರ್ಗಾವರ್ಗಿಯ ನೀತಿ ಏನು?

ಆ) ಈ ವರ್ಷ ಎಷ್ಟು ವರ್ಗಾವಣೆಗಳು ಹಾಗೂ ಯಾವ ಯಾವ ಇಲಾಖೆಯಲ್ಲಿ ನಡೆದಿದೆ? (ಇದರ ಸಮಗ್ರ ವಿವರವನ್ನು ಒದಗಿಸುವುದು)

ಇ) ಸರ್ಕಾರ ಈ ವರ್ಷ 1997-98ನೇ ಸಾಲಿನ ವರ್ಗಾವಣೆಯು ಮಾಡುವುದಿಲ್ಲವೆಂದು ಹೇಳಿರುವುದು ನಿಜವೇ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ದಿನಾಂಕ 28-4-95ರ ಅಧಿಕೃತ ಜ್ಞಾಪನದಲ್ಲಿ ಹೇಳಿದಂತೆ, ಮಿತವ್ಯಯದ ದೃಷ್ಟಿಯಿಂದ ವರ್ಗಾವಣೆಗಳನ್ನು ಅತ್ಯಾವಶ್ಯಕ ಪ್ರಕರಣಗಳಲ್ಲಿ ಮಾತ್ರ ಮಾಡುವುದು. ಮುಂದುವರೆದು, ವರ್ಗಾವಣೆಗಳನ್ನು, ದಿನಾಂಕ 14-5-96ರ ಅಧಿಕೃತ ಜ್ಞಾಪನದ ಹಾಗೂ ದಿನಾಂಕ 19-4-97ರ ಅಧಿಕೃತ ಜ್ಞಾಪನದಲ್ಲಿ ನಮೂದಿಸಿದ ಸಂದರ್ಭಗಳಿಗೆ ಮಾತ್ರ ಸೀಮಿತಗೊಳಿಸಬೇಕೆಂದು ಆದೇಶಿಸಲಾಗಿದೆ.

ಆ) ವಿವಿಧ ಇಲಾಖೆಗಳಲ್ಲಿ ಮಾಡಲಾಗಿರುವ ವರ್ಗಾವಣೆಗಳ ಒಟ್ಟು ಸಂಖ್ಯೆ ಕೇಂದ್ರಿಕೃತವಾಗಿ ಲಭ್ಯವಿರುವುದಿಲ್ಲ. ಸಂಬಂಧಿಸಿದ ಸಚಿವರಿಗೆ ಪ್ರಶ್ನೆ ಕೇಳಿ ಇಲಾಖಾವಾರು ಮಾಹಿತಿ ಪಡೆಯಬಹುದು.

ಇ) ಐಟಂ (ಅ) ಗೆ ನೀಡಿದ ಉತ್ತರ ಇದಕ್ಕೂ ಅನ್ವಯಿಸುತ್ತದೆ.